ಶ್ರೀ ಜೆ.ಸಿ. ಮಾಧುಸ್ವಾಮಿ :- ಇದಕ್ಕೆ ನಾವೂ ಕೂಡ ವಿರೋಧ ಮಾಡಿ ಹೊರಕ್ಕೆ ಹೋಗುತ್ತೇವೆ. ಅಸೆಂಬ್ಲಿಯನ್ನು ತಮ್ಮ ಇಷ್ಟ ಬಂದ ಹಾಗೆ ನಡೆಸಿಕೊಳ್ಳಿ.....

ಅಧ್ಯಕ್ಷರು :- ನಿಮ್ಮ ವಿಷಯವನ್ನು ತೆಗೆದುಕೊಳ್ಳುತ್ತೇನೆ. ತಾವು ಹೊರಟು ಹೋದರೆ ಹೇಗೆ?

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್ :- ಅಜೆಂಡಾದಲ್ಲಿರುವುದನ್ನು ಬಿಟ್ಟು ಬೇರೆಯದನ್ನು ಹೇಗೆ ತೆಗೆದುಕೊಳ್ಳುತ್ತೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ :- ಇದೇನು ಗ್ರಾಮ ಪಂಚಾಯಿತಿ ಸಭೆಯೇ? ಬಿಲ್‌ನ ಬಗ್ಗೆ ತಾವೇಕೆ ಹೇಳುತ್ತಿದ್ದೀರಿ. ಮತ್ತೆ ಅವರು ಎದ್ದು ನಿಂತುಕೊಂಡು ಬಿಲ್ ಅನ್ನು ಓದುತ್ತಾರೆ, ನಾವು ಇಲ್ಲಿ ಕುಳಿತುಕೊಂಡು ಅದನ್ನು ಕೇಳಬೇಕೆ?

ಶ್ರೀ ಶಿವನಂದ ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಇಲ್ಲಿ ಎಲ್ಲರದೂ ಕೂಡ ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಸಮಸ್ಯೆಗಳು ಇರುತ್ತವೆ. ಆದ್ದರಿಂದ, ಅವುಗಳಿಗೂ ಕೂಡ ತಾವು ಪ್ರಾಧಾನ್ಯತೆಯನ್ನು ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ಇಲ್ಲದಿದ್ದರೆ.....

ಅಧ್ಯಕ್ಷರು :- ಸದಸ್ಯರ ಸಮಸ್ಯೆ ಬಗ್ಗೆ I understand .....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾನು ಇದನ್ನು ವಿರೋಧ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾನು ಕೂಡ ಹೊರಕ್ಕೆ ಹೋಗುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಮತ್ತು ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಸಭಾಧ್ಯಕ್ಷರ ಪೀಠದ ಮುಂದೆ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು :– ಆ ಮ್ಯಾಟರ್ ಅರ್ಜೆಂಟ್ ಎಂದು ಅವರು ಹೇಳುತ್ತಿದ್ದಾರೆ. ಅವರ ಅಡ್ಮಿನಿಸ್ಟ್ರೇಷನ್ ಕೂಡ ನಡೆಯಬೇಕಲ್ಲವೇ?

(ಈ ಹಂತದಲ್ಲಿ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಮತ್ತು ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಸದನದಿಂದ ಹೊರಕ್ಕೆ ಹೋದರು)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಇದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ವಿರೋಧಪಕ್ಷದವರೆಲ್ಲರೂ ಹೊರಗಿಟ್ಟು, ತಾವು ಮಸೂದೆಯನ್ನು ಮಂಡಿಸತಕ್ಕಂಥಾದ್ದು ಒಳ್ಳೆಯ ಸಂಪ್ರದಾಯವಲ್ಲ. ಕೆಟ್ಟ ಸಂಪ್ರದಾಯಕ್ಕೆ ತಾವೇ ದಾರಿಯನ್ನು ಮಾಡಿಕೊಡುತ್ತಿದ್ದೀರಿ. ಇದು ನಿಜವಾಗಿಯೂ ಕೂಡ ಯಾವುದೇ ಕಾರಣಕ್ಕೂ ಒಳ್ಳೆಯ ಸೂಚನೆಯಲ್ಲ. ಇದು ಈ ಸದನಕ್ಕೆ ಮಾಡತಕ್ಕಂಥ ಅಗೌರವವಾಗುತ್ತದೆ. ಆದ್ದರಿಂದ, ದಯಮಾಡಿ ಈ ಮಸೂದೆಯನ್ನು ಮಂಡಿಸಬಾರದು. ಅದನ್ನು ಮಂಡಿಸುವುದಾದರೆ ನಾವೆಲ್ಲರೂ ಹೊರಕ್ಕೆ ಹೋಗುತ್ತೇವೆ. ಇದು ಸರಿಯಲ್ಲ. ನಿಮಗೆ ಇಷ್ಟ ಬಂದಂತೆ ತಾವು ಏನು ಬೇಕಾದರೂ ಮಾಡಿಕೊಳ್ಳಿ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಶಿವಾನಂದ ಎಸ್. ಪಾಟೀಲ್‌ರವರು ಸದನದಿಂದ ಹೊರಕ್ಕೆ ಹೋದರು)

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ಈ ಬಿಲ್ ಒಂದು ವಾರದಿಂದ ಅಜೆಂಡಾದಲ್ಲಿ ಬರುತ್ತಿದೆ. ಏಕಾಏಕಿ ಈಗ ತಂದಿರತಕ್ಕಂಥಾದ್ದಲ್ಲ.

ಶ್ರೀ ಆರ್. ಧ್ರುವನಾರಾಯಣ್ :– ಮಾನ್ಯ ಅಧ್ಯಕ್ಷರೆ, ಇವತ್ತಿನ ಅಜೆಂಡಾದಲ್ಲಿ ನಮ್ಮದು ಗಮನ ಸೆಳೆಯುವ ಸೂಚನೆ ಇದೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಭಾಧ್ಯಕ್ಷರೆ, ಇದು ಒಂದು ವಾರದಿಂದ ಅಜೆಂಡಾದಲ್ಲಿ ಬರುತ್ತಿದೆ.